ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 631/2015

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಎಸ್. ಎನ್. ಶ್ರೀಕಾಂತ್ | ದಿನಾಂಕಃ 25.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಎಸ್. ಎ. ನಾರಾಯಣಪ್ಪ | |
| ವಯಸ್ಸು | : | 51ವರ್ಷ | |
| ಉದ್ಯೋಗ | : | ಸಿ ಪಿ ಐ, ಬೀರೂರು ವೃತ್ತ, ಚಿಕ್ಕಮಗಳೂರು. | **CW-8** |
| ವಾಸಸ್ಥಳ | : | ಬೀರೂರು. | **PW-8** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ನಾನು ದಿನಾಂಕಃ 18.04.2013 ರಿಂದ 12.08.2015ರವರೆಗೆ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 19.09.2013 ರಂದು ಕಡತ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ದಿಃ22.09.2013 ರಂದು ಕೃತ್ಯ ಸ್ಥಳವಾದ ಕೊತ್ತಲವಾಡಿ ಗ್ರಾಮದ ಶ್ರೀಚನ್ನಬಸಪ್ಪರವರಿಗೆ ಸೇರಿದ ಸರ್ವೆ ನಂ.208 ರ ಚಾಸಾ1ರವರು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ನಿಪಿ 2 ರಂತೆ ಸಂಜೆ 4.00 ರಿಂದ 4.45 ರವರೆಗೆ ಮಹಜರ್ ಮಾಡಿರುತ್ತೇನೆ. ಸಾಕ್ಷಿ ನಿಪಿಃ2ರ ಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿಃ2(ಡಿ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ 1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ22.10.2013 ರಂದು ಆರೋಪಿಗಳು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಚಾಸಾ 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ದಿಃ22.05.2014 ರಂದು ಕೃತ್ಯ ಸ್ಥಳದ ಆರ್ ಟಿ ಸಿ ಮತ್ತು ಮ್ಯುಟೇಶನ್ ಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಆರ್ ಟಿ ಸಿ ಮತ್ತು ಮ್ಯುಟೇಷನ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 8 ಮತ್ತು 9 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 8(ಎ) ಮತ್ತು 9(ಎ.) ಎಂದು ಗುರುತಿಸಲಾಯಿತು. ಆರ್ ಟಿ ಸಿ ಯಲ್ಲಿ 1ನೇ ಆರೋಪಿಯ ಹೆಸರು ಇರುವುದು ಖಚಿತವಾಗಿರುತ್ತದೆ. ಅದೇ ದಿನ ನಿಪಿ 3 ಮತ್ತು 4 ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ದಿಃ23.05.2014 ರಂದು ತನಿಖೆ ಪೂರ್ಣಗೊಂಡಿದ್ದು ಆರೋಪಿಗಳ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ ಎನ್ ವಿ ವಕೀಲರಿಂದಃ

ಚಾಸಾ 1 ರವರು ಈ ಪ್ರಕರಣದಲ್ಲಿ ಹೇಳಲಾದ ಕರಾರು ಪತ್ರಕ್ಕೆ ಸಂಬಂಧಿಸಿ ಸಿವಿಲ್ ದಾಖಲು ಮಾಡಿದ ಬಗ್ಗೆ ನಾನು ತನಿಖೆ ಕೈಗೊಂಡಿರುವುದಿಲ್ಲ. ಚಾಸಾ 1 ರವರು ಸಿವಿಲ್ ದಾವೆ ಹೂಡಿದ ಬಗ್ಗೆ ನಿಪಿ1 ರಲ್ಲಿ ಹೇಳಿರುವುದಿಲ್ಲ. ನಿಪಿ 3 ರಂತೆ ಕರಾರು ಆದ ಕುರಿತು ನಾನು ತನಿಖೆ ಮಾಡಿ ಸಾಕ್ಷಿದಾರರನ್ನು ವಿಚಾರಣೆ ಮಾಡಿ ನಿಪಿ 3 ನ್ನು ತಯಾರಿಸಿದ ಬಗ್ಗೆ ಮತ್ತು ಅದರ ನೈಜತೆಯ ಬಗ್ಗೆ ತನಿಖೆ ಕೈಗೊಂಡಿರುವುದಿಲ್ಲ. ಚಾಸಾ 5 ಮತ್ತು 6 ರವರಿಗೆ ಮಹಜರ್ ಕುರಿತು ಲಿಖಿತ ನೋಟೀಸ್ ಜಾರಿ ಮಾಡಿರುವುದಿಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸ್ಥಳದಲ್ಲಿ ನಿಪಿ 2 ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಅವುಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಪಿ 3 ಮತ್ತು 4 ಕರಾರು ಪತ್ರಗಳನ್ನು ಪಡೆದುಕೊಂಡು ಆ ದಿನ ಕಡತಕ್ಕೆ ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಕೃತ್ಯ ಎಸಗಿರದಿದ್ದರು, ಚಾಸಾ 1 ರವರಿಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ತನಿಖೆಯ ಸಮಯದಲ್ಲಿ ಆರೋಪಿಗಳ ವಿರುದ್ಧ ಆರೋಪ ಕಂಡು ಬಂದಿರದಿದ್ದರು ಸಹಾ ಅವರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.